# ಒಳ್ಳೆಯ ಮಾತು

‘ಒಳ್ಳೆತನ ಸಹಜವೇನಲ್ಲ, ಅದು ಅಸಹಜವೂ ಅಲ್ಲ’ ಎನ್ನುವುದು ಎಂ. ಗೋಪಾಲಕೃಷ್ಣ ಅಡಿಗರ ಕವಿತೆಯೊಂದರ ಸಾಲು. ಅಡಿಗರ ಕವಿತೆಯ ಸಾಲನ್ನು ಒಳ್ಳೆಯ ಮಾತಿಗೂ ಅನ್ವಯಿಸಬಹುದು. ನಮ್ಮ ಹಿರಿಯರ ಬದುಕನ್ನು ಇಣುಕಿನೋಡಿದರೆ ಒಳ್ಳೆಯ ಮಾತು ಅಸಹಜವಾಗಿಯೇನೂ ಕಾಣಿಸುವುದಿಲ್ಲ. ಅವರ ಜೀವನದ ಸಹಜ ಭಾಗವಾಗಿ ಒಳ್ಳೆಯ ಮಾತುಗಳು ಹಾಸುಹೊಕ್ಕಾಗಿವೆ. ವ್ಯಕ್ತಿತ್ವದ ಔದಾರ್ಯವೇ ಮಾತಿನ ರೂಪದಲ್ಲಿ ಹೊರಹೊಮ್ಮಿರುವುದೂ ಇದೆ. ಒಳ್ಳೆಯ ಮಾತು ಅಸಹಜವಾಗಿರುವುದು ಹಾಗೂ ದುರ್ಲಭವಾಗಿರುವುದು ಈ ಕಾಲಕ್ಕೆ. ಮಾತಿಗಿರುವ ಮಾರ್ದವತೆ ಹಾಗೂ ಜೀವಶಕ್ತಿಯನ್ನು ಕಳೆಯುವುದರಲ್ಲಿ ನಾವೆಲ್ಲರೂ ಪೈಪೋಟಿ ನಡೆಸುತ್ತಿರುವಂತಿದೆ.

ಒಳ್ಳೆಯ ಮಾತಿನ ವಿಷಯ ಬಂದಾಗ ಸಂಕ್ರಾಂತಿ ಹಬ್ಬ ನೆನಪಾಗುತ್ತದೆ. ಸುಗ್ಗಿಯ ನೆಪದ ಈ ಹಬ್ಬ ಬದುಕಿಗೂ ಮಾತಿಗೂ ಇರುವ ನಂಟನ್ನು ಸೂಚಿಸುವಂತಿದೆ. ‘ಎಳ್ಳುಬೆಲ್ಲ ಕೊಟ್ಟು ಒಳ್ಳೆಯ ಮಾತನಾಡು’ ಎನ್ನುವುದು ಹಬ್ಬದ ಆಚರಣೆಯ ಭಾಗವಾಗಿದೆ. ಎಳ್ಳುಬೆಲ್ಲ ಹಂಚಿ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತೇವೆ. ಆದರೆ, ಒಬ್ಬರಿಗೊಬ್ಬರು ಹಿತ ಕೋರುವುದಕ್ಕೆ ಒಂದು ಹಬ್ಬ ಅಥವಾ ನಿರ್ದಿಷ್ಟ ದಿನ ಬೇಕೆ? ಬಹುಶಃ, ವಕ್ರಮಾತಿನ ಕುರಿತಾದ ಮನುಷ್ಯರ ಮೋಹಕ್ಕೆ ಮದ್ದಿಲ್ಲ ಎನ್ನುವುದು ಮನವರಿಕೆಯಾಗಿ, ಒಂದು ದಿನವಾದರೂ ಒಳ್ಳೆಯ ಮಾತನಾಡಲಿ ಎಂದು ಹಿರಿಯರು ಸಂಕ್ರಾಂತಿಗೂ ಒಳ್ಳೆಯ ಮಾತಿಗೂ ಸಂಬಂಧ ಕಲ್ಪಿಸಿರಬಹುದು.

ಸಂಕ್ರಾಂತಿ ವರ್ಷದ ಆರಂಭದ ಸಂಕೇತವೂ ಹೌದು. ಹೊಸ ವರ್ಷದಿಂದ ಆರಂಭವಾಗುವ ಒಳ್ಳೆಯ ಮಾತು ವರ್ಷವಿಡೀ ಮುಂದುವರೆಯಲಿ ಎನ್ನುವುದು ಹಬ್ಬದ ಆಶಯವಿರುವಂತಿದೆ. ಅದೇನೇ ಇರಲಿ, ಸಂಕ್ರಾಂತಿ ಹಬ್ಬದ ಒಳ್ಳೆಯತನದ ಆಶಯ ವರ್ಷಕ್ಕೊಮ್ಮೆ ಆಚರಿಸಿ ಮರೆಯುವಂತಹದ್ದಲ್ಲ. ಅದು ಅನುದಿನವೂ ಅನುಸರಿಸಬೇಕಾದ ಮೌಲ್ಯ. ವೈಯಕ್ತಿಕ ಸ್ವಾಸ್ಥ್ಯಕ್ಕೆ ಹಾಗೂ ಸಮಷ್ಟಿಯ ಆರೋಗ್ಯಕ್ಕೆ ಒಳ್ಳೆಯ ಮಾತು ಅಗತ್ಯ.

ಒಳ್ಳೆಯ ಮಾತು ಎಂದರೇನು? ಸಾಮಾನ್ಯವಾಗಿ, ಒಳ್ಳೆಯ ಮಾತು ಎನ್ನುವುದನ್ನು, ಇನ್ನೊಬ್ಬರ ಮನಸ್ಸಿಗೆ ಖುಷಿ ಕೊಡುವ ಮಾತು ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ಅದು ಒಳ್ಳೆಯತನದ ಸರಿಯಾದ ವ್ಯಾಖ್ಯೆಯಲ್ಲ. ಒಳ್ಳೆಯತನ ಎನ್ನುವುದು ಸತ್ಯಕ್ಕೆ ನಿಷ್ಠವಾದುದು. ನಿಷ್ಠುರತನಕ್ಕೆ ಸಂಬಂಧಿಸಿದ್ದು.

ಒಳ್ಳೆಯದು ಎನ್ನುವುದರಲ್ಲಿನ ‘ಒಳಿತು’ ಸಮಾಜದ ಹಿತವನ್ನು ಸೂಚಿಸುವಂತಹದ್ದು. ಈ ಒಳಿತು ಮಾತಿನೊಂದಿಗೆ ಸೇರಿಕೊಂಡಾಗ, ಮಾತಿಗೂ ಸಮಾಜದ ಹಿತಕ್ಕೂ ಇರುವ ಸಂಬಂಧ ಸ್ಪಷ್ಟವಾಗುತ್ತದೆ. ಇಂದಿನ ಸನ್ನಿವೇಶದಲ್ಲಿ ಸಮಾಜದಲ್ಲಿ ಹೆಚ್ಚು ಬಳಕೆಯಾಗುತ್ತಿರುವುದು ಒಳಿತಿನ ಮಾತುಗಳಲ್ಲ; ಒಡಕಿನ ಮಾತುಗಳು. ಆ ಒಡಕು ಮನಸುಗಳ ನಡುವೆ ಬಿರುಕುಂಟು ಮಾಡುತ್ತದೆ; ಆ ಬಿರುಕು ಸಮುದಾಯಗಳ ನಡುವೆಯೂ ಉಂಟಾಗಿ, ಅಂತಿಮವಾಗಿ ಸಮಾಜದ ಸ್ವಾಸ್ಥ್ಯ ಹದಗೆಡುತ್ತದೆ.

‘ತೂತು ಒಲೆಗೆಡಿಸಿತು, ಮಾತು ಮನೆಗೆಡಿಸಿತು’ ಎನ್ನುವ ಗಾದೆಯಿದೆ. ಈ ಗಾದೆಯ ಮುಂದುವರಿಕೆಯಂತೆ ‘ಮಾತು ಬೆಳ್ಳಿ, ಮೌನ ಬಂಗಾರ’ ಎನ್ನುವ ಮಾತನ್ನು ಗಮನಿಸಬಹುದು. ಇವೆರಡೂ ಮಾತುಗಳು, ಮಾತಿನ ಅಪಾಯಕಾರಿ ಶಕ್ತಿಯತ್ತಲೇ ಬೆಟ್ಟು ಮಾಡುತ್ತಿವೆ. ಹಾಗಾದರೆ, ಮಾತನಾಡದಿದ್ದರೆ ಅಪಾಯ ಉಂಟಾಗುವುದಿಲ್ಲವೆ? ಮೌನವಾಗಿರುವುದು ಅನಾಹುತವನ್ನು ತಡೆಗಟ್ಟುವ ಮಾರ್ಗವೆ? ಇಲ್ಲ, ಮೌನ ಬಂಗಾರ ಎನ್ನುವುದು ಎಲ್ಲ ಸಂದರ್ಭದಲ್ಲೂ ಸರಿಯಲ್ಲ. ಅರ್ಥವಿಲ್ಲದ ಮಾತು ಚಪಲವಾಗುತ್ತದೆ, ಬಡಬಡಿಕೆಯಾಗುತ್ತದೆ; ಅಂಥ ಸಂದರ್ಭದಲ್ಲಿ ಮೌನವೇ ಉತ್ತಮ ಎನ್ನುವುದು ಸರಿ. ಆದರೆ, ಎಲ್ಲ ಸಂದರ್ಭಗಳಲ್ಲೂ ಮೌನ ಬಂಗಾರವೇನಲ್ಲ. ಮಾತನಾಡಲೇಬೇಕಾದ ಸಂದರ್ಭದಲ್ಲಿ ಮೌನವಾಗಿದ್ದರೆ, ಅದು ವಾಸ್ತವಕ್ಕೆ ಬೆನ್ನು ಮಾಡಿದಂತೆ. ಪಲಾಯನವಾದ ಸತ್ಯವಂತನ ಲಕ್ಷಣವಲ್ಲ.

ಅಪ್ರಿಯ ಸತ್ಯವಾದರೂ ಸರಿ, ಹೇಳಬೇಕಾದ ಸಂದರ್ಭದಲ್ಲಿ ಮಾತನಾಡಲೇಬೇಕು. ನಮ್ಮ ಮಾತಿನಿಂದ ಎದುರಿಗಿರುವವರಿಗೆ ನೋವಾಗುತ್ತದೆ ಎನ್ನುವ ಸಂದರ್ಭದಲ್ಲಿ ಸತ್ಯವನ್ನು ಹೇಳದಿರುವುದು ಸರಿಯಲ್ಲ. ಹಾಗೆಂದು ನಮ್ಮ ಮಾತು ಕಟುವಾಗಿರಬೇಕಿಲ್ಲ. ನಾನು ಹೇಳುತ್ತಿರುವುದು ಸತ್ಯವನ್ನಷ್ಟೇ ಎನ್ನುವ ಅರಿವಿದ್ದರೆ, ಇನ್ನೊಬ್ಬರ ಮನಸ್ಸಿಗೆ ಗಾಸಿಯಾಗದಂತೆ ಮಾತನಾಡುವುದು ಸಾಧ್ಯವಿದೆ.

ಸತ್ಯಕ್ಕೆ ನಿಷ್ಠವಾದ ಕೆಲವರು ಜಗತ್ತಿನ ಕಣ್ಣಿಗೆ ಹಟವಾದಿಗಳಂತೆ, ಅಹಂಕಾರಿಗಳಂತೆ ಕಾಣಿಸುತ್ತಾರೆ. ಸತ್ಯನಿಷ್ಠೆಯನ್ನು ಕಿರೀಟವನ್ನಾಗಿ ಧರಿಸಿದಾಗ ನೋಡುವವರ ಕಣ್ಣಿಗೆ ಅದು ಅಸಹಜವಾಗಿ ಕಾಣಿಸುವುದು ಸಹಜ. ಆ ಕಾರಣದಿಂದಲೇ, ಸತ್ಯವ್ರತಕ್ಕೆ ಬದ್ಧರಾದವರು ಸರಳವಾಗಿರುವುದೂ ಅಗತ್ಯ. ಸತ್ಯಕ್ಕೆ ನಿಷ್ಠವಾಗಿರುವುದನ್ನು ವಿಶೇಷ ಎಂದು ಭಾವಿಸಿ, ನಮ್ಮಷ್ಟಕ್ಕೆ ನಾವು ಭಿನ್ನ ಎಂದು ಭಾವಿಸುವುದು, ಉಳಿದವರನ್ನು ಅನುಮಾನಿಸುವುದು ಸರಿಯಲ್ಲ. ವಿನಯವನ್ನು ಒಳಗೊಳ್ಳದೆ ಹೋದರೆ ಸತ್ಯದ ಮಾರ್ಗ ಸಂಕೀರ್ಣವಾಗುತ್ತಾ ಹೋಗುತ್ತದೆ. ಸತ್ಯ ಒರಟಾಗುತ್ತಾ ಹೋದಂತೆ, ಅದು ತನ್ನ ಹೊಳಪು ಹಾಗೂ ಜೀವಶಕ್ತಿಯನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಈ ನಿಟ್ಟಿನಲ್ಲಿ ಮಹಾತ್ಮನೇ ನಮಗೆ ಮಾದರಿ. ಗಾಂಧೀಜಿ ತಮ್ಮ ಬದುಕನ್ನು ಸತ್ಯದೊಂದಿಗಿನ ಅನ್ವೇಷಣೆ ಎಂದು ಕರೆದುಕೊಂಡರು. ಆದರೆ, ತಾವು ನಂಬಿದ ಹಾಗೂ ಅನುಸರಿಸಿದ ಸತ್ಯ, ಅಹಿಂಸೆಗಳನ್ನು ತಮ್ಮ ಕಾಣ್ಕೆಯೆಂದು ಅವರು ಹೇಳಿಕೊಳ್ಳಲಿಲ್ಲ. ಅವು ಹಿಮಾಲಯದಷ್ಟೇ ಹಳೆಯದಾದ ಮೌಲ್ಯಗಳು ಎನ್ನುವ ವಿನಯ ಅವರದಾಗಿತ್ತು. ಅವರ ಮಾತು ಮತ್ತು ಕೃತಿಯ ನಡುವೆ ಎಳ್ಳಷ್ಟೂ ವ್ಯತ್ಯಾಸವಿರಲಿಲ್ಲ.

ಒಳ್ಳೆಯ ಮಾತು ನಮ್ಮ ಮನಸ್ಸನ್ನು ಪೂರ್ವಗ್ರಹಗಳಿಂದ ಮುಕ್ತವಾಗಿಸುವ ಹಾಗೂ ತಿಳಿಯಾಗಿಸುವ ಔಷಧಿಯೂ ಹೌದು. ಸತ್ಯದ ಮಾರ್ಗದಲ್ಲಿ, ಒಳ್ಳೆಯ ಮಾತುಗಳಾಡುವುದನ್ನು ರೂಢಿಸಿಕೊಳ್ಳುವುದು ನಾವು ಇತರರಿಗೆ ಅಥವಾ ಸಮಾಜಕ್ಕೆ ಮಾಡುವ ಉಪಕಾರವಲ್ಲ. ಅದು ನಮಗೆ ನಾವು ಮಾಡಿಕೊಳ್ಳುವ ಉಪಕಾರ. ಒಳ್ಳೆಯ ಮಾತು ಆಡುವುದೆಂದರೆ, ಒಳ್ಳೆಯ ಜೀವನವನ್ನು ಬದುಕುವುದು.

**■ ಚಂಪಕಮಾಲಾ**

## ಮಾತೇ ಮುತ್ತು

- ಈ ಜಗತ್ತಿನಲ್ಲಿ ಭಯಕ್ಕೆ ಜಾಗ ಇಲ್ಲ. ಶಕ್ತಿ ಮಾತ್ರ ಶಕ್ತಿಯನ್ನು ಗೌರವಿಸುತ್ತದೆ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ಮುಕ್ತವಾದ ಮನಸ್ಸು ಇಲ್ಲದ ವ್ಯಕ್ತಿ ಬದುಕಿದ್ದರೂ ಸತ್ತಂತೆ. ಮುಕ್ತವಾದ ಮನಸ್ಸು ವ್ಯಕ್ತಿಯೊಬ್ಬನ ಅಸ್ತಿತ್ವದ ಪ್ರತೀಕ.
  —ಬಿ.ಆರ್. ಅಂಬೇಡ್ಕರ್
- ಮುನ್ನಡೆ ಸಾಧಿಸಿದರೆ ಮಾತ್ರ ಸಾಲದು, ಮೇಲ್ನಡೆ ಸಾಧಿಸುವುದು ಮನುಷ್ಯನ ಗುರಿಯಾಗಬೇಕು.
  —ಕೆ.ಎಸ್. ನಿಸಾರ್ ಅಹಮದ್
- ಜ್ಞಾನ ಮತ್ತು ಅಹಂ ಎರಡಕ್ಕೂ ನೇರವಾದ ಸಂಬಂಧ ಇರುತ್ತದೆ. ಜ್ಞಾನ ಕಡಿಮೆ ಇದ್ದಷ್ಟೂ ಅಹಂ ಹೆಚ್ಚಿರುತ್ತದೆ.
  —ಆಲ್ಬರ್ಟ್ ಐನ್‌ಸ್ಟೀನ್
- ನಮಗೆ ಅಗತ್ಯ ಇದ್ದಷ್ಟನ್ನು ಮಾತ್ರ ತಿಳಿದುಕೊಂಡು ಮಿಕ್ಕಿದ್ದನ್ನು ನೋಡಿ ಅಚ್ಚರಿಪಡುತ್ತಾ ಇದ್ದುಬಿಡುವುದು ಒಳ್ಳೆಯದು.
  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ
- ನಿನ್ನಿಂದ ಸಾಧ್ಯವಾಗದ ಕೆಲಸಗಳನ್ನು ನಾನು ಮಾಡಬಹುದು. ನನ್ನಿಂದ ಸಾಧ್ಯವಾಗದ ಕೆಲಸಗಳನ್ನು ನೀನು ಮಾಡಬಹುದು. ಆದರೆ, ನಾವಿಬ್ಬರೂ ಒಟ್ಟಿಗೆ ಸೇರಿದರೆ ಮಹತ್ತರವಾದ ಕೆಲಸಗಳನ್ನು ಮಾಡಬಹುದು. ಹಾಗಾಗಿ ನಾವೆಲ್ಲ ಜೊತೆಯಾಗಿರಬೇಕು.
  —ಮದರ್ ತೆರೇಸಾ
- ಸಮಸ್ಯೆಗಳು ಎದುರಾದಾಗ ಬೇರೆಯವರನ್ನು ಅವಲಂಬಿಸುವುದಕ್ಕಿಂತ ನೀವೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ.
  —ಗೌತಮ ಬುದ್ಧ